# SAMPLE PAPER FOR SUMMATIVE ASSESSMENT -II Set II
## SECOND TERM 2011-12

**SUB : KANNADA** **CLASS – IX** **M.MARKS: 90** **TIME: 3 Hrs**

---

*ಸೂಚನೆಗಳು :* 1. ಈ ಪ್ರಶ್ನೆ ಪತ್ರಿಕೆಯು ಎ,ಬಿ,ಸಿ, ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.

- ವಿಭಾಗ-A (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು
- ವಿಭಾಗ-B (ಬರವಣಿಗೆ ಕೌಶಲ) : 14 ಅಂಕಗಳು
- ವಿಭಾಗ-C (ಅನ್ವಯಿಕ ವ್ಯಾಕರಣ) : 14 ಅಂಕಗಳು
- ವಿಭಾಗ-D (ಪಠ್ಯಗಳ ಅಧ್ಯಯನ) : 50 ಅಂಕಗಳು

---

## ವಿಭಾಗ-A (ವಾಚನ ಮತ್ತು ಗ್ರಹಿಕಾ ಕೌಶಲ) : (12 ಅಂಕಗಳು)

I.1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧೯೪೭ ಆಗಸ್ಟ್ ೧೫ ರಂದು ಭಾರತದ ಬಾನಿನಲ್ಲಿ ತ್ರಿವರ್ಣ ಧ್ವಜ ಹಾರಿತು. ಸ್ವಾತಂತ್ರ್ಯ ಸಾರಿತು. ಆದರೆ ಹೈದರಾಬಾದ್ ಪ್ರಾಂತ್ಯದಲ್ಲಿ ಆ ಧ್ವಜ ನಿಷೇಧಿತ ವಸ್ತುವಾಯಿತು. ಗಾಂಧಿ ಟೊಪ್ಪಿ ತಿರಸ್ಕೃತವಾಯಿತು. ಹೈದರಾಬಾದ್ ಪ್ರಾಂತ್ಯದಲ್ಲಿ ವಂದೇಮಾತರಂ ಗೀತೆ ದೇಶದ್ರೋಹದ ಹಾಡಾಯಿತು. ಹೈದರಾಬಾದ್ ನಿಜಾಂ ತನ್ನ ರಾಜ್ಯವನ್ನು ಪ್ರತ್ಯೇಕ ಸ್ವತಂತ್ರ ರಾಜ್ಯವೆಂದು ಘೋಷಿಸಿದ. ರಾಜ್ಯಶಾಹಿ ಆಡಳಿತ ನಡೆಸಿದನು.

ಹೈದರಾಬಾದ್ ಪ್ರಾಂತ್ಯದ ಸ್ವಾತಂತ್ರ್ಯ ಪ್ರೇಮಿಗಳು ರಾಜ್ಯಶಾಹಿ ಆಡಳಿತವನ್ನು ವಿರೋಧಿಸಿದರು. ಚಳವಳಿನಡೆಸಿದರು. ೧೫ ರಂದೇ ಈಗಿನ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಮಾಲಗಿತ್ತಿಯಲ್ಲಿ ಕೆಂಚಮ್ಮನ ಗುಡಿಯ ಮುಂದೆ ಹೈದರಾಬಾದ್ ನಿಜಾಮನನ್ನು ವಿರೋಧಿಸಿ ಧ್ವಜವೇರಿಸಲು ಜನರು ಸಿದ್ಧರಾದರು. ಆಗ ಬಡಿಗೇರ ಸೀತಮ್ಮ ಒಂದು ಕೈಯಲ್ಲಿ ಕುಡುಗೋಲು, ಮತ್ತೊಂದು ಕೈಯಲ್ಲಿ ಧ್ವಜ ಹಿಡಿದು ನರ್ತಿಸಿದಳು. ಬಾದಿಂನಾಳ ಕತ್ರಿಯಲ್ಲಿ ಸೀತಮ್ಮ ರಜಾಕಾರರೊಂದಿಗೆ ಜೀವದ ಹಂಗು ತೊರೆದು ಸಾರಾಯಿ ಅಂಗಡಿಗಳನ್ನು ಬಂದ್ ಮಾಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದಳು. ರಜಾಕಾರರ ವಿರುದ್ಧದ ಕಾರ್ಯಾಚರಣೆಯಲ್ಲಿ ಬಾಂಬ್ ಎಸೆದಳು. ಹೀಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರನಾರಿ ಎನಿಸಿಕೊಂಡಳು.

ಪ್ರಶ್ನೆಗಳು :

ಅ) ವಂದೇ ಮಾತರಂ ಗೀತೆ ಎಲ್ಲಿ ದೇಶದ್ರೋಹದ ಹಾಡಾಯಿತು? 1

ಆ) ಹೈದರಾಬಾದ್ ಪ್ರಾಂತ್ಯದಲ್ಲಿ ಭಾರತದ ಧ್ವಜವನ್ನು ನಿಷೇಧಿಸಲು ಕಾರಣವೇನು? 2

ಇ) ಯಾರನ್ನು ವಿರೋಧಿಸಿ ಧ್ವಜವೇರಿಸಲು ಜನರು ಸಿದ್ಧರಾದರು? 1

ಈ) ಸ್ವಾತಂತ್ರ್ಯ ಹೋರಾಟದಲ್ಲಿ ಸೀತಮ್ಮಳ ಪಾತ್ರವೇನು? 2

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಮೊನ್ನೆ ಮೊನ್ನೆ ನಡೆಯಿತಲ್ಲ ಬಾಹುಬಲಿಯ ಮಜ್ಜನ
ಬೆಟ್ಟದಲ್ಲಿ ಕೇಳಿತೊಂದು ಪುಟ್ಟ ಮಗುವು ಅಜ್ಜನ
'ಈತನಾರು ತಾತ ಇಲ್ಲಿ ನಿಂತು ನೋಡುತಿರುವನು
ಇಂದ್ರಗಿರಿಯ ನೆತ್ತಿಯಲ್ಲಿ ಏನು ಮಾಡುತಿರುವನು ?'
'ಇವನೇ ಬಾಹುಬಲಿಯು ಮಗು ! ಧೀರತನದ ಮೂರ್ತಿಯು!
ಹತ್ತುವವರ ಇಳಿಯುವವರ ನಿಂತು ನೋಡುತಿರುವನು
ನಿಲ್ಲುವವರ ನಡೆಯುವವರ ಲೆಕ್ಕ ಮಾಡುತಿರುವನು
ಬಳಲಿದವರಿಗೆಲ್ಲ ಇಲ್ಲಿ ಕೈಯ ನೀಡುತಿರುವನು'
'ಇಲ್ಲಿ ಏಕೆ ಬಂದು ನಿಂತ? ಇಷ್ಟು ದೂರ! ಎತ್ತರ!
ಭಯವಾಗದೆ ಇವನಿಗಿಲ್ಲಿ ಯಾರು ಇಲ್ಲ ಹತ್ತಿರ'
'ಇವನಿಗೆಲ್ಲಿ ಭಯವು ಮಗು ಅಭಯ ಮೂರ್ತಿ ಈತನು'
ಭರತ ಚಕ್ರವರ್ತಿ ಇವನ ಅಣ್ಣ ಒಮ್ಮೆ ಆತನು
ಹಮ್ಮಿನಲ್ಲಿ ಬಂದು ಸೆಣಸಿ ತಮ್ಮನಲ್ಲಿ ಸೋತನು
ತಾತ, 'ಎರೆವ ಮುಂಚೆ ಎಣ್ಣೆ ಹಚ್ಚಿ ಅಮ್ಮ ನನಗೆ ಹೀಗೆಯೇ
ನಿಲ್ಲಿಸುವಳು ಬಾಹುಬಲಿಯು ಕೂಡ ತನ್ನ ಹಾಗೆಯೆ
ನಿಂತು ಕಾಯುತಿರುವ ಕಣ್ಣು ತೆರೆದು ಮೊದಲ ಚೆಂಬಿಗೆ'

ಸು.ರಂ.ಎಕ್ಕುಂಡಿ

ಪ್ರಶೆಗಳು:

ಅ) ಅಜ್ಜನನ್ನು ಮಗುವು ಏನೆಂದು ಕೇಳಿತು? 1

ಆ) ಬಾಹುಬಲಿಯು ಬೆಟ್ಟದ ಮೇಲೆ ನಿಂತು ಏನು ಮಾಡುತಿರುವನು? 2

ಇ) ಬಾಹುಬಲಿಯ ಅಣ್ಣ ಯಾರು? 1

ಈ) ಮಗು ತಾನೂ ಬಾಹುಬಲಿಯೂ ಒಂದೇ ಎಂದು ಏಕೆ ಹೇಳುವುದು? 2

## ವಿಭಾಗ-B (ಬರವಣಿಗೆ ಕೌಶಲ) : (14 ಅಂಕಗಳು)

II. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ೧೫೦ ಪದಗಳಿಗೆ ಮೀರದಂತೆ ನಿಬಂಧ ಬರೆಯಿರಿ. 6

೧. ಕ್ರೀಡೆಗಳು. ೨. ಧಾರ್ಮಿಕ ಹಬ್ಬಗಳು. ೩. ಪ್ರವಾಸದ ಪ್ರಯೋಜನಗಳು

III. ನೀವು ಕೆ.ಕುಮಾರ, ವಿವೇಕಾನಂದ ಪ್ರೌಢ ಶಾಲೆ, ಶಿವಮೊಗ್ಗ ಎಂದು ಭಾವಿಸಿ ಚಿತ್ರದುರ್ಗದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ನಿಮ್ಮ ಗೆಳೆಯ ಶಂಕರನಿಗೆ ನೀವು ಕಂಡ ಸುಂದರ ಕನಸನ್ನು ವರ್ಣಿಸಿ ಪತ್ರ ಬರೆಯಿರಿ. 4

IV. ಕೆಳಗಿನ ಗದ್ಯಭಾಗವನ್ನು ಓದಿ ಅದರ ಮುಖ್ಯಾಂಶಗಳನ್ನು ಸಂಕ್ಷೇಪಿಸಿ ಬರೆಯಿರಿ. 4

ಸುಮಾರು ಎಂಟು ನೂರು ವರ್ಷಗಳ ಹಿಂದೆ ಬಸವಣ್ಣನವರು ಈಗಿನ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಜನಿಸಿದರು. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಇವರು ಕಲ್ಯಾಣದ ದೊರೆ ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನ ಮಂತ್ರಿಯಾಗಿ ಶ್ರದ್ಧೆಯಿಂದ ದುಡಿದು ದಕ್ಷ ಅಧಿಕಾರಿ ಎನಿಸಿಕೊಂಡರು. ಬಸವಣ್ಣನವರು ಜನರಲ್ಲಿ ಹೊಸ ಜಾಗೃತಿಯನ್ನು ಮೂಡಿಸುವ ಪ್ರಯತ್ನ ಮಾಡಿದರು. ಜಾತಿ ಭೇದ ತಪ್ಪು. ಹುಟ್ಟಿದ ಜಾತಿ ಮುಖ್ಯವಲ್ಲ, ಭಕ್ತಿ ಮುಖ್ಯ, ಶುಭ್ರ ಪರಿಶುದ್ಧ ಜೀವನ ಮುಖ್ಯ ಎಂದು ಸಾರಿದರು. ಧಾರ್ಮಿಕ ಕ್ಷೇತ್ರದಲ್ಲಿ ಮಹಿಳೆಯರಿಗೆ ಪುರುಷರಷ್ಟೆ ಹಕ್ಕು ಇದೆ ಎಂದು ಲಿಂಗಧಾರಣೆ, ದೀಕ್ಷಾ ಸಂಸ್ಕಾರಗಳಿಗೆ ಅವಕಾಶ ಕೊಟ್ಟು ಸ್ವತಂತ್ರವಾಗಿ ಪೂಜೆ ಮಾಡಲು ಸಮಾನ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು

ಬಸವಣ್ಣನವರು ಕಲ್ಯಾಣದಲ್ಲಿ ಅಲ್ಲಮ ಪ್ರಭು ಮೊದಲಾದ ಶಿವಭಕ್ತರ ನೆರವಿನಿಂದ ಅನುಭವ ಮಂಟಪವನ್ನು ಕಟ್ಟಿದರು. ಅಲ್ಲಿ ಶಿವ ಶರಣ, ಶಿವ ಶರಣೆಯರು ಸೇರಿ ಧರ್ಮದ ಬಗ್ಗೆ ವಿವೇಚನೆ ನಡೆಸುತ್ತಿದ್ದರು. ಒಣ ಆಡಂಬರದ ಭಕ್ತಿ ಸಲ್ಲದು, ಈ ಲೋಕ ಕರ್ತಾರನ ಕಮ್ಮಟ, ಕಾಯಕವೇ ಕೈಲಾಸ, ಪ್ರತಿಯೊಬ್ಬರು ದುಡಿಯಬೇಕು, ತಮ್ಮ ಕೆಲಸವನ್ನು ನಿಷ್ಠೆಯಿಂದ ಮಾಡಬೇಕು ಎಂದು ಉಪದೇಶ ಮಾಡಿದರು.

## ವಿಭಾಗ–C (ಅನ್ವಯಿಕ ವ್ಯಾಕರಣ) : *(14 ಅಂಕಗಳು)*

V. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ 2
   ಸಮಯೋಚಿತ ಅತ್ಯಾದರ
2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ 2
   ರಾಮಲಕ್ಷ್ಮಣ ಮಣೆಯಿತ್ತು
3. 'ಪಲಾಯನ ಮಾಡು'- ಈ ಪಡೆನುಡಿಯನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ. 1
4. ಕೆಳಗಿನವುಗಳಿಗೆ ತತ್ಸಮ/ತದ್ಭವ ರೂಪ ಬರೆಯಿರಿ. 1
   ಮುಖ ಕತ್ತುರಿ
5. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ. 1
   ಆಜ್ಯ ನಕ್ಷತ್ರ
6. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ 1
   ಸಫಲ ನಂಬಿಕೆ
7. ಕೆಳಗಿನ ಪದಗಳನ್ನು ಲಿಂಗ ಬದಲಿಸಿ ಬರೆಯಿರಿ. 1
   ಕವಿ ಹೆಂಗಸು
8. ಕೆಳಗಿನ ಪದಗಳನ್ನು ವಚನ ಬದಲಿಸಿ ಬರೆಯಿರಿ. 1
   ರಾಣಿ ಕಲಾವಿದರು
9. ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ. 1

ಮಹಾರಾಜನು ಯುದ್ಧದಲ್ಲಿ ಗೆದ್ದನು.

10. ನಿನ್ನೆ ಅವನು ಊರಿಂದ ಬಂದನು. – ಇಲ್ಲಿರುವ ಸರ್ವನಾಮ ಗುರುತಿಸಿ ಬರೆಯಿರಿ. 1

11. ನಿಮಗೆ ಬೇಕಾದ ಒಂದು ಗಾದೆ ಮಾತನ್ನು ವಿವರಿಸಿ. 2

೧. ಬೆಳ್ಳಗಿರುವುದೆಲ್ಲ ಹಾಲಲ್ಲ.

೨. ತುಂಬಿದ ಕೊಡ ತುಳುಕುವುದಿಲ್ಲ.

## ವಿಭಾಗ–D (ಪಠ್ಯಗಳ ಅಧ್ಯಯನ) : (50 ಅಂಕಗಳು)

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 14

1) ದಶರಥನ ಕುಲಪುರೋಹಿತರು.

೧)ವಶಿಷ್ಠ ೨)ಗೌತಮ ೩)ವಿಶ್ವಾಮಿತ್ರ ೪)ವಾಲ್ಮೀಕಿ

2) ಕಲೆಯ ಆಗರ ಪ್ಯಾರಿಸ್ ಇದು ಒಂದು ____

೧) ನಾಟಕ ೨)ಕಾದಂಬರಿ ೩) ಪ್ರವಾಸ ಕಥನ ೪) ಯಕ್ಷಗಾನ

3) ಭಾಂವ್ರಿದೇವಿಯ ಪತಿಯ ಹೆಸರು.

೧) ಮದನಲಾಲ್ ೨) ರಾಮಲಾಲ್ ೩) ಮೋಹನಲಾಲ್ ೪)ಕರಣಲಾಲ್.

4) ಈ ಪ್ರಸ್ಥಭೂಮಿ ಅತ್ಯಂತ ಸುರಕ್ಷಿತ ಎಂದು ಭಾವಿಸಲಾಗಿತ್ತು.

೧) ಪೂರ್ವ ೨) ಉತ್ತರ ೩) ಪಶ್ಚಿಮ ೪) ದಕ್ಷಿಣ

5) ಕಬ್ಬಿಗರ ಬಲ್ಲಹ ಎಂಬ ಬಿರುದು ಪಡೆದವರು:

೧) ರಾಘವಾಂಕ ೨) ಕುವೆಂಪು ೩) ಮುದ್ದಣ ೪) ಬಸವಣ್ಣ

6) ಪಾಟಳೀಪುತ್ರ ನಗರದ ಶ್ರೇಷ್ಠಿ

೧) ಸುದತ್ತ ೨) ಧನದತ್ತ ೩) ವಸುದತ್ತ ೪) ದೇವದತ್ತ

7) ಶ್ರೀರಾಮನು ಉಪದೇಶ ಪಡೆದ ಮಂತ್ರಗಳು :

೧) ಮಂತ್ರ ತಂತ್ರ ೨) ಬಲ ಅತಿಬಲ ೩) ಗುಣ ಅವಗುಣ ೪) ಶರ ಕರ

8) ಮಾನವೀಯತೆಯ ಸಂಗಾತಿಗಳೆಲ್ಲ ಮಾಡಿದುದು :

೧) ಪಕ್ಷಾಂತರ ೨) ಗತ್ಯಂತರ ೩) ಕುತಂತ್ರ ೪) ಸ್ಥಳಾಂತರ

9) ಜನರು ಹೂಗಳ ಕಾಲದಲ್ಲಿ ಇದನ್ನು ಬಯಸುತ್ತಾರೆ :

೧) ಕಾಯಿಯನ್ನು ೨) ಎಲೆಯನ್ನು ೩) ಮರವನ್ನು ೪) ಹಣ್ಣನ್ನು

10) ಉದರ ವೈರಾಗ್ಯ ಈ ಕೀರ್ತನೆಯ ಕವಿ

೧) ವಿಜಯದಾಸರು ೨) ಪುರಂದರದಾಸರು ೩) ಕನಕದಾಸರು ೪) ಅಲ್ಲಮಪ್ರಭು

11) ಪಯಣಿಗನು ಇಲ್ಲಿ ವಿಶ್ರಮಿಸ ಬಯಸಿದನು.

೧) ಮನೆಯೊಳಗೆ ೨) ಮನೆಯ ಹೊರಗೆ ೩) ಮರದ ಕೆಳಗೆ ೪) ಮಂಚದ ಮೇಲೆ

12) ಭಲೆ ಭಲೇ ಎಂದು ಉದ್ಗಾರವೆಳೆದವರು :

೧) ಕಲಾವಿದ ೨) ಚಕ್ರವರ್ತಿ ೩) ಕವಿ ೪) ಪ್ರೇಕ್ಷಕರು

13) ಇವರನ್ನು ಸಿಂಧೂ ತನುಜ ಎಂದೂ ಕರೆಯುವರು:

೧) ಕರ್ಣ ೨) ಅರ್ಜುನ. ೩) ದ್ರೋಣ ೪) ಭೀಷ್ಮ

14) ಕಲಾವಿದ ಇಷ್ಟು ವರ್ಷಗಳಲ್ಲಿ ಭಿತ್ತಿ ಚಿತ್ರ ರಚಿಸಿದ್ದ :

೧) ಆರು ೨) ಏಳು ೩) ಎಂಟು ೪) ಹತ್ತು

VII. ಕೆಳಗಿನ ಪ್ರಶ್ನೆಗಳಿಗೆ ೨-೩ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 * 4=8

1. ಪ್ಯಾರಿಸ್ ನಗರದ ಕೊರತೆಗಳು ಯಾವುವು ?
2. ದಶರಥನ ಮಕ್ಕಳು ಹೇಗೆ ಬೆಳೆಯುತ್ತಿದ್ದರು ?
3. ಕವಯತ್ರಿ ಮಾನವೀಯತೆಯನ್ನು ಕೇಳಿದ ಪ್ರಶ್ನೆಗಳು ಯಾವುವು ?
4. ಹೆಂಗಸು ಯೋಧನನ್ನು ಹೇಗೆ ಉಪಚರಿಸಿದಳು ?

VIII. ಕೆಳಗಿನ ಪ್ರಶ್ನೆಗಳಿಗೆ ೫-೬ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 3*6=18

1) ಅಮೇರಿಕಾದ ಅಂತರ ರಾಷ್ಟ್ರೀಯ ಅಧ್ಯಯನ ಕೇಂದ್ರವೆಂಬ ವಸತಿ ಗೃಹ ಹೇಗಿತ್ತು ?

2) ರಾಮ ಲಕ್ಷ್ಮಣರು ತಾಟಕಿಯನ್ನು ಹೇಗೆ ಕೊಂದರು ?

3) ಸಂದರ್ಭದೊಂದಿಗೆ ವಿವರಿಸಿ.

ಎತ್ತುಗಳು ಮತ್ತು ಗಾಡಿ ಭೂಕಂಪದಲ್ಲಿ ನಾಶವಾಗಿರಲಿಲ್ಲ.

ಅಥವಾ

ಪದ್ಯಂ ವಧ್ಯಂ ಗದ್ಯಂ ಹೃದ್ಯಂ

4) ಡಾಂಭಿಕ ಭಕ್ತನು ಘನ ಪೂಜೆಯನ್ನು ಹೇಗೆ ಮಾಡುತ್ತಾನೆ?

5) ನಿಂತರೆ, ಮಲಗಿದರೆ, ಓಡಿದರೆ ಜನರ ಟೀಕೆಗಳೇನು ?

6) ಸಂದರ್ಭದೊಂದಿಗೆ ವಿವರಿಸಿ.

ನಾನು ನಿನ್ನ ಹತ್ತಿರ ಬಂದು ಎಬ್ಬಿಸಿ ಮಾತನಾಡಿದೆ.

ಅಥವಾ

ಚಂದ್ರನಲ್ಲ ಅದು ಚೆಂಡು.

IX. ಕೆಳಗಿನ ಪ್ರಶ್ನೆಗಳಿಗೆ ೮-೧೦ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 5*2=10

1) ಭಾಂವ್ರಿದೇವಿ ಬಾಲ್ಯ ವಿವಾಹದ ವಿರುದ್ಧ ನಡೆಸಿದ ಹೋರಾಟವನ್ನು ವಿವರಿಸಿ.

ಅಥವಾ

ಸುದಾಮೆಗೆ ಒದಗಿದ ಪ್ರಾಣಾಪಾಯ ಸಂದರ್ಭ ಹಾಗೂ ಅವಳು ಕೈಗೊಂಡ ಪ್ರತಿಜ್ಞೆಯನ್ನು ವಿವರಿಸಿ.

2) ಯೋಧ ಮತ್ತು ಹೆಂಗಸು ಕಥನ ಕವನದ ಸಾರಾಂಶವನ್ನು ಕಥಾ ರೂಪದಲ್ಲಿ ಬರೆಯಿರಿ.

ಅಥವಾ

ಕರ್ಣನ ಮಾತಿಗೆ ಭೀಷ್ಮರು ಪ್ರತಿಕ್ರಿಯಿಸಿದ ಬಗೆಯನ್ನು ಆದರಿಂದ ವ್ಯಕ್ತವಾಗುವ ಅವರ ವ್ಯಕ್ತಿತ್ವವನ್ನು ಚಿತ್ರಿಸಿ.

1\.

2

3

********

# SAMPLE PAPER FOR SUMMATIVE ASSESSMENT - II <u>SET II</u>
## SECOND TERM 2011-12

**SUB : KANNADA** **CLASS – X** **M.MARKS: 80** **TIME: 3 Hrs**

***ಸೂಚನೆಗಳು :*** *1. ಈ ಪ್ರಶ್ನೆ ಪತ್ರಿಕೆಯು ಎ,ಬಿ,ಸಿ, ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.*

- *ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು*
- *ವಿಭಾಗ–B (ಬರವಣಿಗೆ ಕೌಶಲ) : 14 ಅಂಕಗಳು*
- *ವಿಭಾಗ–C (ಅನ್ವಯಿಕ ವ್ಯಾಕರಣ) : 14 ಅಂಕಗಳು*
- *ವಿಭಾಗ–D (ಪಠ್ಯಗಳ ಅಧ್ಯಯನ) : 40 ಅಂಕಗಳು*

- **ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : *(12 ಅಂಕಗಳು)***

1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅಭಿವೃದ್ಧಿ ಪಥದಲ್ಲಿ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಅಗ್ರವಾಗಿರುವ ಭಾರತಕ್ಕೆ 'ಶಿಕ್ಷಣದ ಸಾರ್ವತ್ರೀಕರಣ' ಅಗತ್ಯವಾಗಿದೆ. ಆದರೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನಾನಾ ಭಾಷೆ ಮತ್ತು ಸಂಸ್ಕೃತಿಗಳನ್ನೊಳಗೊಂಡ ವಿಶಾಲವಾದ ನಮ್ಮ ದೇಶದ ಪ್ರತಿಯೊಂದು ಗ್ರಾಮಾಂತರ ಪ್ರದೇಶಕ್ಕೆ ಒದಗಿಸುವುದು ಅತ್ಯಂತ ಕಷ್ಟಕರವಾದ ಕಾರ್ಯವಾಗಿದೆ.

ಆದರೂ ಈ ಸಮಸ್ಯೆಯ ಪರಿಹಾರಕ್ಕೆ ಉಪಗ್ರಹಗಳನ್ನಾಧರಿಸಿದ ಶಿಕ್ಷಣದ ಪ್ರಯೋಗಗಳು ಉತ್ತೇಜನ ನೀಡಿವೆ. ಇತ್ತೀಚಿಗೆ ಶಿಕ್ಷಣಕ್ಕಾಗಿಯೇ ಮುಡುಪಾಗಿರುವ 'ಎಜುಸ್ಯಾಟ್'ಎಂಬ ಉಪಗ್ರಹವನ್ನು ಯಶಸ್ವಿಯಾಗಿ ಹಾರಿಬಿಡಲಾಗಿದೆ. ಇಡೀ ದೇಶದ ಎಲ್ಲಾ ಭಾಗಗಳಿಗೂ ತಂತ್ರಜ್ಞಾನದ ಮುಖಾಂತರ ವಿಚಾರ–ವಿನಿಮಯ ಹಾಗೂ ಸಂಪರ್ಕಗಳನ್ನೊಳಗೊಂಡ ಶೈಕ್ಷಣಿಕ ಪ್ರಸಾರ ಮತ್ತು ಸೇವೆಯನ್ನು ಒದಗಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ಧೇಶವಾಗಿದೆ.ಇದರಿಂದಾಗಿ ನಾವಿಂದು ಇಡೀ ದೇಶದಲ್ಲಿ ಶಿಕ್ಷಣ ಪ್ರಸಾರದ ಕ್ರಾಂತಿಯನ್ನು ಸಾಧಿಸುತ್ತ ದಾಪುಗಾಲು ಇಟ್ಟಿದ್ದೇವೆ. ಉತ್ತಮ ಶಿಕ್ಷಕರು ನಡೆಸಿಕೊಡುವ ತರಗತಿಯ ಪಾಠಗಳನ್ನು ಎಲ್ಲಾ ಗ್ರಾಮಾಂತರ ಪ್ರದೇಶಗಳೂ ಸೇರಿದಂತೆ ಇಡೀ ದೇಶಕ್ಕೆ ಉಪಗ್ರಹಗಳಿಂದ ಪ್ರಸಾರ ಮಾಡಲಾಗುತ್ತಿದೆ. ಹೀಗಾಗಿ ಉಪಗ್ರಹ ಆಧಾರಿತ ದೂರ ಶಿಕ್ಷಣವು ವಿದ್ಯಾಪ್ರಸಾರಕ್ಕೆ ಒಂದು ವರವಾಗಿ ಪರಿಣಮಿಸಿದೆ.

ಪ್ರಶ್ನೆಗಳು :

ಅ) ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಭಾರತಕ್ಕೆ ಯಾವುದು ಅಗತ್ಯವಾಗಿದೆ ? 1

ಆ) ಭಾರತಕ್ಕೆ ಎದುರಾದ ಕಷ್ಟಕರವಾದ ಕಾರ್ಯ ಯಾವುದು ? 1

ಇ) 'ಎಜುಸ್ಯಾಟ್'ಕಾರ್ಯಕ್ರಮದ ಮುಖ್ಯ ಉದ್ಧೇಶವೇನು ? 2

ಈ) ಉಪಗ್ರಹ ಆಧಾರಿತ ದೂರ ಶಿಕ್ಷಣವು ವಿದ್ಯಾಪ್ರಸಾರಕ್ಕೆ ಹೇಗೆ ವರವಾಗಿ ಪರಿಣಮಿಸಿದೆ ? 2

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅಂದು..ಎರಡು ಸಾವಿರದ್ಯೆನೂರು ವರುಷಗಳ ಪೂರ್ವ
ಬುದ್ಧನೆಂಬವನಿದ್ದ ಮಹಾಪುರುಷನೋರ್ವ
ಸಿದ್ಧಾರ್ಥನೆಂಬುದವನ ಮೂಲ ಹೆಸರು
ಬೌದ್ಧ ಧರ್ಮಕೆ ಆದನವ ಉಸಿರು !

ಒಮ್ಮೆ..ಸತ್ತವನ ಹೆಣಕಂಡು ಮರುಗಿದನವ ಸಿದ್ಧಾರ್ಥ
ಮುಪ್ಪು ಮರಣಗಳುಂಟೆ ? ಏನವಕೆ ಅರ್ಥ ?
ಅದನು ತಿಳಿಯಲಿಕೆಂದೆ ಹೊರಟು ಬಿಟ್ಟವ ನೀತ
ಮಗ–ಮಡದಿ ರಾಜ್ಯಕೋಶವ ಬಿಟ್ಟನವನೀತ !

ಅಡವಿಯಲಿ ಅಲೆದಾಡಿ ಬಳಲಿದನು ಬೆಂಡಾಗಿ
ಕೊನೆಗೊಮ್ಮೆ ಬೆಳಕು ಕಂಡನವ ಭೋದಿ ವೃಕ್ಷದ ತಲದಿ
ಆಶೆಯೆಂಬುದೆ ಘನ ; ತೃಣಕಿಲ್ಲ ಸರಿಸಾಟಿ
ದಯೆಯು ಧರ್ಮದ ಮೂಲ ಬದುಕಿಗದು ಮೇಟ !

ಸಾಧನೆಯ ಮಾರ್ಗದಲಿ ಸಾಗಿ ಸಾಗಲು ಬುದ್ಧ
ಪ್ರೀತಿಯೆಂಬುದ ತೋರಿ, ತ್ಯಾಗದಿಂ ಜಗ ಗೆದ್ದ
ಮಾಯೆ ಮೋಹಗಳಲ್ಲಿ ನಾವಿರಲು ಬದ್ಧ
ಆಗಬಹುದೇ ಹೇಳಿ ! ಮನುಕುಲವು ಬುದ್ಧ !

– (ಆಗಬೇಕಿಂದು ಮನುಕುಲವು ಬುದ್ಧ)

ಸಂಗ್ರಹ : ಕಾವ್ಯ ಸಂಗಮ. ಕವಿ/ಸಂಪಾದಕ : ಮಹಾಲಿಂಗ ಯಾಳಗಿ.

ಪ್ರಶ್ನೆಗಳು :

ಅ) ಬುದ್ಧನ ಮೂಲ ಹೆಸರೇನು ? 1
ಆ) ಬುದ್ಧ ಏನನ್ನು ತಿಳಿಯಲು ಹೊರಟ ? 2
ಇ) ಬುದ್ಧನು ಬೆಳಕು ಕಂಡ ಬಗೆ ಹೇಗೆ ? 1
ಈ) ಬುದ್ಧ ಜಗವನ್ನು ಹೇಗೆ ಗೆದ್ದ ? 2

## ವಿಭಾಗ–B (ಬರವಣಿಗೆ ಕೌಶಲ) : (14 ಅಂಕಗಳು)

II. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ೧೫೦ ಪದಗಳಿಗೆ ಮೀರದಂತೆ ನಿಬಂಧ ಬರೆಯಿರಿ. 6

೧. ನನ್ನ ಮೆಚ್ಚಿನ ಸಾಹಿತಿ. ೨. ಪರಿಸರ ಮಾಲಿನ್ಯದ ನಿವಾರಣೋಪಾಯಗಳು. ೩. ಪತ್ರಿಕೆಗಳ ಮಹತ್ವ.

III. ನೀವು ಕೆ.ಮಂಜೇಶ, ಆದರ್ಶ ನಗರ ಹಾಸನ ಎಂದು ಭಾವಿಸಿ, ದಿನಾಂಕ ೧೨–೨–೨೦೧೧ ರ ಪ್ರಜಾವಾಣಿ ದಿನ ಪತ್ರಿಕೆಯ ಜಾಹೀರಾತಿನ ಮೇರೆಗೆ ವಿವೇಕಾನಂದ ಪದವಿ ಪೂರ್ವಕಾಲೇಜು, ಮೈಸೂರು ಇಲ್ಲಿ ಖಾಲಿ ಇರುವ ಕನ್ನಡ ಉಪನ್ಯಾಸಕ ಹುದ್ದೆಗೆ ಅರ್ಜಿ ಸಲ್ಲಿಸಿರಿ. 4

ಅಥವಾ

ನೀವು ಪಿ.ಕಿರಣ, ಸಿದ್ಧಗಂಗಾ ನಗರ ತುಮಕೂರು ಎಂದು ಭಾವಿಸಿ, ಬೇಂದ್ರೆಯವರ 'ನಾಕುತಂತಿ' ಕವನ ಸಂಕಲನವನ್ನು ಕಳುಹಿಸಿಕೊಡಲು ವಿನಂತಿಸಿಕೊಂಡು, ವ್ಯವಸ್ಥಾಪಕರು,ಸಮಾಜ ಪುಸ್ತಕ ಮಳಿಗೆ, ಧಾರವಾಡ ಇವರಿಗೊಂದು ಪತ್ರ ಬರೆಯಿರಿ.

IV. ನೀವು ಆರ್.ಮೋಹನ, ಗಾಂಧಿನಗರ ದಾವಣಗೆರೆ ಎಂದು ಭಾವಿಸಿ, ನಿಮ್ಮ ಪ್ರದೇಶದಲ್ಲಿ ವಿಪರೀತ ಮಳೆಯಿಂದ ಉಂಟಾದ ಪರಿಸ್ಥಿತಿಯನ್ನು ವಿವರಿಸಿ ಒಂದು ವರದಿಯನ್ನು ತಯಾರಿಸಿ. 4

## ವಿಭಾಗ–C (ವ್ಯಾಕರಣ) : (14 ಅಂಕಗಳು)

V. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ 2
   ಮನೆಗೆಲಸ ವಾಗ್ದೇವಿ.
2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ 2
   ಮುಂಜಾವು ಪೆರ್ಬಯಕೆ
3. 'ಕಣ್ಣಲ್ಲಿ ಕಣ್ಣಿಟ್ಟುನೋಡು'- ಈ ಪಡೆನುಡಿಯನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ. 1
4. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ 1
   ಆರೋಹಣ ಸುಖ
5. ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ ಬರೆಯಿರಿ. 1
   ರಾಮನಿಂ ಮನೆಯ
6. ಕೆಳಗಿನವುಗಳಿಗೆ ತತ್ಸಮ/ತದ್ಭವ ರೂಪ ಬರೆಯಿರಿ. 1
   ಮುಖ ಗರತಿ
7. ಕೆಳಗಿನ ಪದಗಳಲ್ಲಿರುವ ಜೋಡುನುಡಿಯನ್ನು ಗುರುತಿಸಿ ಬರೆಯಿರಿ. 1
   ೧) ಥವಥವ ೨) ಸರಸರ ೩) ಮನೆಮಠ ೪) ಧಗಧಗ
8. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ. 1
   ಪಂಕ ಈಳೆ
9. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ. 1
   ೧. ಬಾಯಾಳು : ಬಳ್ಳು : : ದೀರ್ಘಕರ್ಣ=________
   ೨. ಸ್ನೇಹ + ಅಭಿಮಾನ =ಸ್ನೇಹಾಭಿಮಾನ : : ಷಟ್ + ಮುಖ =________

10. ಅವನು ಸುಮ್ಮನೆ ಊರೂರು ಸುತ್ತುತ್ತಾನೆ – ಇಲ್ಲಿರುವ ಸರ್ವನಾಮ ಗುರುತಿಸಿ ಬರೆಯಿರಿ. 1

೧). ಊರೂರು ೨) ಸುಮ್ಮನೆ ೩) ಅವನು ೪) ಸುತ್ತುತ್ತಾನೆ

11. ನಿಮಗೆ ಬೇಕಾದ ಒಂದು ಗಾದೆ ಮಾತನ್ನು ವಿವರಿಸಿ. 2

೧. ಅಡಿಕೆಗೆ ಹೋದ ಮಾನ ಆನೆ ಕೊಟ್ಟರು ಬಾರದು.

೨. ಅಂಗೈ ಹುಣ್ಣಿಗೆ ಕನ್ನಡಿ ಏಕೆ ?

## ವಿಭಾಗ–D (ಪಠ್ಯಗಳ ಅಧ್ಯಯನ) : (40 ಅಂಕಗಳು)

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 14

1) ಭಾಷೆ ಇದಕ್ಕೆ ಸಾಧನವಾಗಿದೆ.
   ೧) ವಿಚಾರವಿನಿಮಯಕ್ಕೆ ೨) ಓದುವುದಕ್ಕೆ ೩) ಬರೆಯುವುದಕ್ಕೆ ೪) ಜ್ಞಾನಕ್ಕೆ

2) ಬುದ್ಧ ಇವನನ್ನು ಅರಸುತ್ತ ಬಂದ.
   ೧) ಪಾಲಾಕ್ಷ ೨) ಅಂಗುಲೀಮಾಲ ೩) ಏಕಾಕ್ಷ ೪) ಬಲಿದಾಸ

3) ವೆಂಕಣ್ಣನಿಗೆ ಸಹಾಯ ಮಾಡಿದ ಹೆಡ್‌ಮೇಷ್ಟ್ರು.
   ೧) ರಂಗಣ್ಣ ೨) ವೆಂಕಟಸುಬ್ಬಯ್ಯ
   ೩) ಪರಂಗಿ ಟೋಪಿ ಸಾಹೇಬ ೪) ಸುಬ್ಬಯ್ಯ

4) ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದ ವರ್ಷ.
   ೧) 1956 ೨) 1952. ೩) 1947. ೪) 1980.

5) ಪಶುಲೋಮ ನಿಂತಿದ್ದು.
   ೧)ಮರದ ಮೇಲೆ. ೨) ಹಾವಿನ ಮೇಲೆ ೩) ಹುತ್ತದ ಮೇಲೆ ೪) ಹಗ್ಗದ ಮೇಲೆ

6) ಮೊಲವು ಬಾವಿಯಲ್ಲಿ ಇದನ್ನು ಕಂಡಿತು.
   ೧) ಸಿಂಹವನ್ನು ೨) ಆನೆಯನ್ನು
   ೩) ತನ್ನ ಬಿಂಬವನ್ನು ೪) ನರಿಯನ್ನು

7) ನೋವು ಪಡುವಾಗ ಇದನ್ನು ಬಿಗಿ ಹಿಡಿದಿರಬೇಕು:
   ೧) ಕಣ್ಣನ್ನು ೨) ಕಿವಿಯನ್ನು ೩) ತುಟಿಯನ್ನು ೪) ಮೂಗನ್ನು

8) ಯಕ್ಷನ ರೂಪದಲ್ಲಿ ಬಂದವರು :
   ೧) ಧರ್ಮರಾಜ ೨) ಯಮ ೩) ಇಂದ್ರ ೪) ಅಗ್ನಿ.

9) ಲೋಕದಲ್ಲಿ ಬೆಲೆಯಾದದ್ದು :
   ೧) ಚಿನ್ನ ೨) ಮಣ್ಣು ೩) ಹೆತ್ತತಾಯಿ ೪) ಹೊತ್ತನಾಡು

10) ಅಕ್ಕಮಹಾದೇವಿಯ ಆರಾಧ್ಯ ದೈವ.
   ೧) ಬಸವಣ್ಣ ೨) ಅಲ್ಲಮಪ್ರಭು ೩) ಚನ್ನಮಲ್ಲಿಕಾರ್ಜುನ ೪) ಗುಹೇಶ್ವರ

11) ಉರಗಪತಾಕ ಇವನು.

೧) ಕರ್ಣ　　೨) ಕಳಿಂಗ

೩) ದುಶ್ಯಾಸನ　　೪) ದುರ್ಯೋಧನ

12) ಬನವಾಸಿಯಲ್ಲಿ ಮರಿದುಂಬಿಯಾಗಿ ಹುಟ್ಟಲು ಬಯಸಿದ ಕವಿ :

೧) ರನ್ನ　　೨) ಜನ್ನ

೩) ಪಂಪ　　೪) ರಾಘವಾಂಕ

13) ಕವಿರಾಜ ಮಾರ್ಗದ ಕರ್ತೃ :

೧) ನಂಜುಂಡಕವಿ　೨) ನಾಗವರ್ಮ.　೩) ನೃಪತುಂಗ.　೪) ಕೇಶಿರಾಜ.

14. ಕನ್ನಡ ಈ ಭಾಷಾ ವರ್ಗಕ್ಕೆ ಸೇರಿದೆ :

೧) ಸಂಸ್ಕೃತ　೨) ಅರೇಬಿಕ್　೩) ಆಂಗ್ಲೋ　೪) ದ್ರಾವಿಡ

VII. ಕೆಳಗಿನ ಪ್ರಶ್ನೆಗಳಿಗೆ ೫-೬ ವಾಕ್ಯಗಳಲ್ಲಿ ಉತ್ತರ ಬರೆಯಿರಿ.　3*6=18

1) ಆಂಗ್ಲಭಾಷೆ ವಿಶ್ವ ವ್ಯಾಪಿಯಾಗಲು ಕಾರಣವೇನು ?

2) ಮೇಷ್ಟ್ರು ತನ್ನ ಹೆಂಡತಿಯ ಬಗೆಗೆ ಹೇಳಿದ ಮಾತುಗಳನ್ನು ಸಂಗ್ರಹವಾಗಿ ಬರೆಯಿರಿ.

3) ಸಂದರ್ಭದೊಂದಿಗೆ ವಿವರಿಸಿ.

ನಾ ಪೇಳ್ವ ಕಜ್ಜವದು ಸಾಧ್ಯವೇ ನಿನಗೆ ?

ಅಥವಾ

ನಮ್ಮೆಲ್ಲರ ವಿಪತ್ತುಗಳೆಲ್ಲವೂ ಈಗ ತೊಲಗಿದವು.

4) ಸರ್ವಜ್ಞನಾಗಲು ಏನನ್ನು ಮಾಡಬೇಕು ?

5) ಲಕ್ಷ್ಮೀಧರಾಮಾತ್ಯನ ಶಾಸನ ಸೂಚಿಸಿರುವ ಲೋಕೋಪಕಾರಿ ಕಾರ್ಯಗಳಾವುವು ?

6) ಸಂದರ್ಭದೊಂದಿಗೆ ವಿವರಿಸಿ.

ನೀರು ಕುಡಿದು ವಿತಾಳಿಸಿದರು.

ಅಥವಾ

ಬಂಗಾರ ಮೋರೆ ತೊಳೆದೇನ.

VIII. ಕೆಳಗಿನ ಪ್ರಶ್ನೆಗಳಿಗೆ ೮-೧೦ ವಾಕ್ಯಗಳಲ್ಲಿ ಉತ್ತರ ಬರೆಯಿರಿ.　4*2=8

1) ವಿಧಾನ ಸೌಧ ನಿರ್ಮಾಣದ ಹಿನ್ನೆಲೆಯನ್ನು ವಿವರಿಸಿ.

ಅಥವಾ

ಮೊಲವು ಸಿಂಹವನ್ನು ಹೇಗೆ ಕೊಂದಿತು ?ವಿವರಿಸಿ.

2) ಅಜಗಣ್ಣನ ಯೋಗದ ಬಗೆಗೆ ಮುಕ್ತಾಯಕ್ಕನ ಅಭಿಪ್ರಾಯವೇನು ?

ಅಥವಾ

ಭೀಮ ಮತ್ತು ದುರ್ಯೋಧನರು ಪರಸ್ಪರ ಹೊಡೆದಾಡಿದ ಸನ್ನಿವೇಶವನ್ನು ಅದರ ಪರಿಣಾಮವನ್ನು ವಿವರಿಸಿ.

*********

1 [signature]

2 [signature]

3 [signature]

[signature]